**<u>ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ</u>**

<u>ಸಿ.ಸಿ.ನಂ.932/2022</u>

ಅಸಾಃ 3 (ಚಾಸಾ-4)

| | |
|---|---|
| ಹೆಸರು | ಶಾಂತವ್ವ ಹುದ್ದಾರ |
| ತಂದೆಯ /ಗಂಡನ ಹೆಸರು | ಬಸಪ್ಪ |
| ವಯಸ್ಸು | 48 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸಸ್ಥಳ | ಢವಳೇಶ್ವರ |

ದಿನಾಂಕ 19-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದಃ-</u>**

ಚಾಸಾ-1 ನನ್ನ ಮಗಳು. ಚಾಸಾ-5 ನನ್ನ ಮಗ. ಚಾಸಾ-8 ನನ್ನ ಅಣ್ಣ. ಚಾಸಾ-2, 3, 6, 7 ಇವರ ಪರಿಚಯ ನನಗೆ ಇದೆ. ಆರೋಪಿ ಪರಿಚಯ ನನಗೆ ಇಲ್ಲ. ಸುಮಾರು 3 ವರ್ಷಗಳ ಹಿಂದೆ ನಾನು ನನ್ನ ಮಗಳನ್ನು ಬಾಣಂತನ ಮುಗಿಸಿ ಆಕೆಯ ಗಂಡನ ಮನೆಗೆ ಢವಳೇಶ್ವರದಿಂದ ನಾನು, ಚಾಸಾ-1 ಮತ್ತು ಆಕೆಯ 3 ತಿಂಗಳ ಮಗು ಮತ್ತು ನನ್ನ ಮಗನಾದ ಚಾಸಾ-5 ರವರು ನನ್ನ ಅಣ್ಣನಾದ ಚಾಸಾ-8 ರವರ ಮೋಟಾರ್ ಬೈಕ್ ಮೇಲೆ ಪಾಲಬಾವಿಗೆ ಕೇಸರಗೊಪ್ಪ ರಸ್ತೆಯಲ್ಲಿ ಹೋಗುತ್ತಿದ್ದಾಗ, ಕೊಲ್ಲಾಪೂರ ರಸ್ತೆಯಿಂದ ಬರುತ್ತಿದ್ದ ಒಂದು ಕಾರ್ ಗಾಡಿ ಅತೀ ವೇಗವಾಗಿ ಬಂದು ನಾವು ಹೋಗುತ್ತಿದ್ದ ಮೋಟಾರ್ ಬೈಕಗೆ ಹಾಯಿಸಿ ಅಪಘಾತಪಡಿಸಿತು. ಆಗ ಸಂಜೆ ಆಗಿತ್ತು. ಆಗ ನನ್ನ ಎಡಗಾಲಿಗೆ ತೀವ್ರ ಗಾಯವಾಯಿತು. ಅಪಘಾತದಲ್ಲಿ ನನಗೆ ಮತ್ತು ನನ್ನ ಮಗನಿಗೆ ಪೆಟ್ಟಾಯಿತು. ನಂತರ ಚಾಸಾ-6 ಮತ್ತು 7 ರವರು ಅಲ್ಲಿಗೆ ಬಂದು ನಮ್ಮನ್ನು ಮಹಾಲಿಂಗಪೂರದ ಕನಕರೆಡ್ಡಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಪಘಾತದಲ್ಲಿ ನನಗೆ ಪ್ರಜ್ಞೆ ತಪ್ಪಿತ್ತು. ಆದ್ದರಿಂದ ಅಪಘಾತ ಯಾರು ಮಾಡಿದರು ಎಂದು ನನಗೆ ತಿಳಿಯಲಿಲ್ಲ. ನಂತರ ನನ್ನ ಮಗಳಾದ ಚಾಸಾ-1 ರವರು ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದಾರೆ. ಈ ಕುರಿತು ನಾನು ಪೋಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

**<u>ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ:-</u>**

ದಿನಾಂಕ 23-10-2021 ರಂದು ಸಂಜೆ 4-45 ಗಂಟೆಗೆ ಮಹಾಲಿಂಗಪೂರ ಗೋಕಾಕ ರಸ್ತೆ

ಮೇಲೆ ಪಿ ಡಿ ಬುದ್ನಿ ಕ್ರಾಸ್ ಹತ್ತಿರ ಆರೋಪಿ ತಾನು ಚಲಾಯಿಸುತ್ತಿದ್ದ ಕಾರ್ ನಂ.ಎಂಎಚ್-31 ಡಿಕೆ-8837 ಇದನ್ನು ಗೋಕಾಕ ಕಡೆಯಿಂದ ಮಹಾಲಿಂಗಪೂರ ಕಡೆಗೆ ಅತೀ ಜೋರಾಗಿ ಅಲಕ್ಷತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದು ನಾವು ಹೋಗುತ್ತಿದ್ದ ಮೋಟಾರ ಸೈಕಲ್ ನಂ.ಕೆಎ-23 ಇಎಸ್-0729 ನೇದ್ದಕ್ಕೆ ಹಾಯಿಸಿ ಅಪಘಾತಪಡಿಸಿ, ನನ್ನ ಬಲಗಾಲ ಪಾದಕ್ಕೆ ಭಾರೀ ಗಾಯಪಡಿಸಿದ್ದಾರೆ ಎಂದು, ನಂತರ ನನ್ನ ಮಗನಾದ ಚಾಸಾ-5 ಇವರು ನಮಗೆ ಅಪಘಾತಪಡಿಸಿದ ಕಾರ್ ಚಾಲಕನ ಹೆಸರು ಪ್ರಣಯ್ ತಂದೆ ಯುವರಾಜ ಕಾಂಬಳೆ ಎಂದು ಹೇಳಿರುತ್ತಾರೆ. ನಂತರ ನನ್ನ ಮಗಳು ಈ ಕುರಿತಂತೆ ಫಿರ್ಯಾದಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಸದರಿ ಹೇಳಿಕೆಯ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿ ಅದನ್ನು ನಿರಾಕರಿಸಿದ್ದರಿಂದ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-9 ಎಂದು ಗುರುತಿಸಲಾಯಿತು. ನನಗೆ ನಿಪಿ-9 ರಲ್ಲಿರುವ ಎಲ್ಲಾ ಸಂಗತಿಗಳು ತಿಳಿದಿದ್ದರೂ ಸಹ 1 ನೇ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನಂದರೆ ಸರಿಯಲ್ಲ.

**<u>ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ.ಎಸ್ ವ್ಹಿ ಎಸ್ ವಕೀಲರಿಂದ:-</u>**

ಮಹಾಲಿಂಗಪೂರ-ಗುರ್ಲಾಪೂರ ರಸ್ತೆ ದೊಡ್ಡದಿದೆ ಎಂದರೆ ಸರಿ. ಅಲ್ಲಿ ಸಾಕಷ್ಟು ಅಂಗಡಿಗಳಿವೆ ಎಂದರೆ ಸರಿ. ನಾವು ಮಹಾಲಿಂಗಪೂರದಿಂದ ಪಾಲಬಾವಿ ಕಡೆಗೆ ಹೋಗುತ್ತಿದ್ದೆವು ಎಂದರೆ ಸರಿ. ಆರೋಪಿ ತನ್ನ ಸೈಡ್ ಹೋಗುವ ಬದಲು ನಾವು ಹೋಗುತ್ತಿದ್ದ ಸೈಡನಲ್ಲಿ ಕಾರ್ ಚಲಾಯಿಸುತ್ತಿದ್ದರು. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಫಿರ್ಯಾದಿಗೆ ಮತ್ತು ಆರೋಪಿ ನಂ.2 ನೇದವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.

<u>ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ</u>

<u>ಸಿ.ಸಿ.ನಂ.</u>932/2022

ಅಸಾಃ 4 (ಚಾಸಾ-5)

| | |
|---|---|
| ಹೆಸರು | ಮಾಲಿಂಗ ಹುದ್ದಾರ |
| ತಂದೆಯ /ಗಂಡನ ಹೆಸರು | ಬಸಪ್ಪ |
| ವಯಸ್ಸು | 24 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಢವಳೇಶ್ವರ |

ದಿನಾಂಕ 19-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದಃ-</u>

ಚಾಸಾ-4 ನನ್ನ ತಾಯಿ. ಚಾಸಾ-1 ನನ್ನ ತಂಗಿ. ಚಾಸಾ-8 ನನ್ನ ಮಾವ. ಚಾಸಾ-2, 3, 6 ಮತ್ತು 7 ರವರ ಪರಿಚಯ ನನಗೆ ಇದೆ. ಆರೋಪಿಯ ಪರಿಚಯ ಇಲ್ಲ. ಆದರೆ ನೋಡಿದ್ದೇನೆ. ದಿನಾಂಕ 23-10-2021 ರಂದು ಸಂಜೆ 4-30 ಗಂಟೆಗೆ ನಾನು, ನನ್ನ ತಾಯಿ ಮತ್ತು ತಂಗಿ ಮತ್ತು ಆಕೆಯ 3 ತಿಂಗಳ ಮಗು ಢವಳೇಶ್ವರದಿಂದ ಪಾಲಬಾವಿಗೆ ಚಾಸಾ-8 ರವರ ಮೋಟಾರ್ ಬೈಕ್ ನಂ.ಕೆಎ-23 ಇಎಸ್-0729 ಇದರ ಮೇಲೆ ಹೋಗುತ್ತಿದ್ದಾಗ, ಕೇಸರಗೊಪ್ಪ ಕ್ರಾಸ್ ಹತ್ತಿರ ನಮ್ಮ ಸೈಡಾದ ಎಡಗಡೆ ಹೋಗುತ್ತಿದ್ದಾಗ, ಗೋಕಾಕ ಕಡೆಯಿಂದ ಒಂದು ಕಾರ್ ಗಾಡಿ ಅತೀ ವೇಗವಾಗಿ ಬಂದು ನಾನು ಚಲಾಯಿಸುತ್ತಿದ್ದ ಮೋಟಾರ್ ಬೈಕಗೆ ಹಾಯಿಸಿ ಅಪಘಾತಪಡಿಸಿತು. ಆಗ ನಾವೆಲ್ಲರೂ ಮೋಟಾರ ಬೈಕನಿಂದ ಕೆಳಗೆ ಬಿದ್ದೆವು. ನನ್ನ ತಾಯಿಯ ಎಡಗಾಲಿಗೆ ತೀವ್ರ ಗಾಯವಾಯಿತು. ನನಗೆ ತೆರಚಿದ ಗಾಯವಾಯಿತು. ಆಗ ಸಮಯ 04-30 ಆಗಿತ್ತು. ನಂತರ ಅಲ್ಲಿಗೆ ಚಾಸಾ-6 ಮತ್ತು 7 ರವರು ಬಂದು ಚಾಸಾ-6 ರವರು ನಮ್ಮನ್ನು ಕನಕರೆಡ್ಡಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ನನ್ನ ತಂಗಿಯಾದ ಚಾಸಾ-1 ಪೋಲಿಸರಿಗೆ ದೂರು ಸಲ್ಲಿಸಿದ್ದಾರೆ. ಅಪಘಾತಪಡಿಸಿದ ಕಾರ್ ಚಾಲಕನ ಹೆಸರು ನನಗೆ ನೆನಪಿಲ್ಲ. ಈ ಕುರಿತು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

<u>ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ:-</u>

ನಮ್ಮ ಮೋಟಾರ್ ಸೈಕಲಗೆ ಹಾಯಿಸಿ ಅಪಘಾತಪಡಿಸಿದ ಕಾರ್ ಚಾಲಕನ ಹೆಸರು ಪ್ರಣಯ್

ಯುವರಾಜ ಕಾಂಬಳೆ ಮತ್ತು ಕಾರ್ ನಂ.ಎಂಎಚ್-31 ಡಿಕೆ-8837 ಅಂತಾ ಇರುತ್ತದೆ ಎಂದರೆ ಸರಿ. ನಮಗೆ ಅಪಘಾತಪಡಿಸಿದ ಕಾರ್ ಚಾಲಕ ನ್ಯಾಯಾಲಯದ ಮುಂದೆ ಹಾಜರಿದ್ದಾನೆಂದರೆ ಸರಿ.

**<u>ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ.ಎಸ್ ವ್ಹಿ ಎಸ್ ವಕೀಲರಿಂದ:-</u>**

ನನಗೆ ಅಪಘಾತದ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಚಾಸಾ-1 ನನ್ನ ತಂಗಿ ಇರುವ ಕಾರಣ ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮೂರು ಜನರನ್ನು ಕೂಡಿಸಿಕೊಂಡು ಮೋಟಾರ್ ಬೈಕ್ ಚಲಾಯಿಸುತ್ತಿದ್ದೆ ಎಂದರೆ ಸರಿ. ಅಷ್ಟು ಜನ ಕೂತಿದ್ದ ಕಾರಣ ನನಗೆ ಬ್ಯಾಲನ್ಸ ತಪ್ಪಿ ಕೆಳಗೆ ಬಿದ್ದು ಅಪಘಾತಪಡಿಸಿಕೊಂಡಿದ್ದೇವೆಂದರೆ ಸರಿಯಲ್ಲ. ನಾನು ವಾಹನ ಚಲಾಯಿಸಲು ಪರವಾನಗಿ ಪಡೆದಿರುವುದಿಲ್ಲ. ಅಪಘಾತದಿಂದ ಪರಿಹಾರ ಹಣ ಪಡೆಯಲು 1 ನೇ ಆರೋಪಿಯ ಮೇಲೆ ಚಾಸಾ-1 ರವರ ಮೂಲಕ ಸುಳ್ಳು ಫಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿಯನ್ನು ನಾನು ಮೊದಲ ಸಲ ಪೋಲಿಸ್ ಠಾಣೆಯಲ್ಲೇ ನೋಡಿರುತ್ತೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.